ದಿನಾಂಕ ಃ **26-07-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- 3 ನೇ ಪ್ರತಿವಾದಿಯ ಪರ ಶ್ರೀ. ಜಿ.ಪಿ.** ವಕೀಲರಿಂದ **ಃ-**

ಹಿಂದೆ ನಿಮ್ಮ ವಿಚಾರಣೆಯಾದಾಗ ನಿಮ್ಮ ತಾಯಿಯವರು ಶಾಲೆಗೆ ಜಾಗವನ್ನು ನೀಡಿರುತ್ತಾರೆಂದು ನುಡಿದಿದ್ದು, ಎಷ್ಟು ವಿಸ್ತೀರ್ಣವನ್ನು ಶಾಲೆಗೆ ನೀಡಿರುತ್ತಾರೆಂದು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ ಎಷ್ಟು ವಿಸ್ತೀರ್ಣವೆಂದು ಗೊತ್ತಿಲ್ಲವೆಂದು ನುಡಿಯುತ್ತಾರೆ. ನೀವು ಹೂಡಿರುವ ದಾವೆಯ ಷಡ್ಯೂಲ್‌ನಲ್ಲಿ ಶಾಲಾ ವಿಸ್ತೀರ್ಣವನ್ನು ಸೇರಿಸಿ ದಾವೆ ಹೂಡಿರುತ್ತೀರಿ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ದಾವ ಸ್ವತ್ತಿನಲ್ಲಿ ಎರಡು ಮನೆಗಳು ಇದೆ ಎಂದು ಹೇಳಿದ್ದೀರಿ ಎಂದರೆ ಸರಿಯಲ್ಲ. ಸರ್ವೆ ನಂಬರ್-127/1 ರಲ್ಲಿ ಮನೆಗಳು ಇವೆ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ಲಗತ್ತಾಗಿ ದಕ್ಷಿಣಕ್ಕೆ ರಸ್ತೆ ಇರುತ್ತದೆಂದರೆ ಸರಿ. ಸರ್ವೆ ನಂಬರ್-127/1 ನ್ನು ನಾನು ಅಳತೆ ಮಾಡಿಸಿರುವುದಿಲ್ಲ.

ಅಳತೆ ಮಾಡಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಅರ್ಜಿ ಸಲ್ಲಿಸಿರುತ್ತೇವೆ, ಆದರೆ ಅಳತೆ ಮಾಡಲು ಬಂದವರು ನಿಮ್ಮ ಜಾಗ ಒತ್ತುವರಿ ಆಗಿರುತ್ತದೆ, ಆಗಾಗಿ ಅಳತೆ ಮಾಡಲು ಆಗುವುದಿಲ್ಲವೆಂದು ಹೇಳಿರುತ್ತಾರೆಂದು ನುಡಿಯುತ್ತಾರೆ. ಎಷ್ಟು ಜನ ಒತ್ತುವರಿ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿ 4-5 ಜನ ಒತ್ತುವರಿ ಮಾಡಿಕೊಂಡು ಬಂದಿರುತ್ತಾರೆಂದು ನುಡಿಯುತ್ತಾರೆ. ಸದರಿ 4-5 ಜನರನ್ನು ಒತ್ತುವರಿ

ಮಾಡಿಕೊಂಡಿರುವವರನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಎಷ್ಟು ಗುಂಟೆ ಒತ್ತುವರಿ ಮಾಡಿಕೊಂಡಿರುತ್ತಾರೆಂದು ಹೇಳಲು ಆಗುವುದಿಲ್ಲ. ಸರ್ವೆ ನಂಬರ್-127 ಇದ್ದು, ನಂತರ ಸರ್ವೆ ನಂಬರ್-127/1 ಎಂದು ಯಾವಾಗ ಪೋಡಿಯಾಗಿರುತ್ತದೆಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಎಷ್ಟು ವಿಸ್ತೀರ್ಣ ಪೋಡಿ ಆಗಿರುತ್ತದೆಂದು ನಾನು ಅಳತೆ ಮಾಡಿಸಿರುವುದಿಲ್ಲ. ಸರ್ವೆ ನಂಬರ್-127 ಸಂಪೂರ್ಣವಾಗಿ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಅದು ಎಷ್ಟು ಪೋಡಿ ಆಗಿ ಹಾಗೂ ಎಷ್ಟು ವಿಸ್ತೀರ್ಣ ಪೋಡಿ ಆಗಿರುತ್ತದೆಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಆರು ಪೋಟೋಗಳನ್ನು ತೋರಿಸಿ, ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದು, ಅದನ್ನು ಕ್ರಮವಾಗಿ ನಿಡಿ-2 ರಿಂದ ನಿಡಿ-7 ಎಂದು ಗುರುತಿಸಲಾಯಿತು. ಸದರಿ ಪೋಟೋಗಳಲ್ಲಿರುವ ದಾರಿ ಊರಿಗೆ ಆದರಂಗಿ ಗ್ರಾಮಕ್ಕೆ ಹೋಗುವಂತಹ ದಾರಿ ಎಂದರೆ ಸರಿ. ನಿಡಿ-2 ಕಾಲೋನಿಗೆ ಹೋಗುವ ರಸ್ತೆ ಎಂದರೆ ಸಾಕ್ಷಿ ಇಲ್ಲ, ಅದು ಆದರಂಗಿಗೆ ಹೋಗುವ ರಸ್ತೆ ಎಂದು ನುಡಿಯುತ್ತಾರೆ. ನಿಡಿ-7 ಕಾಲುದಾರಿ ಎಂದರೆ ಸರಿ. ನಿಡಿ-4 ಕಾಲೋನಿಗೆ ಹೋಗುವ ದಾರಿ ಎಂದರೆ ಸಾಕ್ಷಿ ಇಲ್ಲ, ಅದು ಊರಿನ ಒಳಗೆ ಬಳಸಿಕೊಂಡು ಬರುವ ದಾರಿ ಎಂದು ನುಡಿಯುತ್ತಾರೆ. ನಿಡಿ-3 ನಮ್ಮ ಜಮೀನಿನ ಕಡೆಯಿಂದ ಬಂದು ಪಶ್ಚಿಮಕ್ಕೆ ಹೋಗುತ್ತದೆಂದರೆ ಸರಿ. ಸದರಿ ರಸ್ತೆ ಸುಮಾರು 30 ವರ್ಷಗಳಿಂದ ಇದೆ ಎಂದರೆ ಸರಿಯಲ್ಲ. ಆದರಂಗಿಗೆ ಹೋಗುವ ರಸ್ತೆ 30 ವರ್ಷಗಳಿಂದ ಇರುತ್ತದೆ. ನಿಡಿ-2 ರಿಂದ ನಿಡಿ-8 ರಲ್ಲಿರುವ ರಸ್ತೆ ಕಾಲುದಾರಿ ರಸ್ತೆ ಎಂದು ನುಡಿಯುತ್ತಾರೆ. ಸದರಿ ರಸ್ತೆ 20 ವರ್ಷಗಳಿಂದ ಇರುತ್ತದೆ. ಸದರಿ ರಸ್ತೆಯನ್ನು ಅನುಮತಿಯಿಂದ ಕೇಳಿದ್ದರೇ ಬಿಡುತ್ತಿದ್ದೇವು ಎಂದು ನುಡಿಯುತ್ತಾರೆ. ಸದರಿ ಕಾಲುದಾರಿಯನ್ನು ನನ್ನ ತಾತನವರು ಬಿಟ್ಟಿರುತ್ತಾರೆ. ಸದರಿ

ಕಾಲುದಾರಿಯನ್ನು ಎಷ್ಟು ಅಡಿಗೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಕಾಲುದಾರಿಯ ಬಗ್ಗೆ ನೀವು ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ನೀವು ದಾವೆಯಲ್ಲಿ ದಾರಿಯನ್ನು ಕಳೆದು ವಿಸ್ತೀರ್ಣ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಸ್ವತ್ತಿಗೆ ಮಾತ್ರ ನಾವು ದಾವೆ ಹೂಡಿರುತ್ತೇವೆಂದು ನುಡಿಯುತ್ತಾರೆ.

ಅಜ್ಜನಹಳ್ಳಿ ಗ್ರಾಮದಲ್ಲಿ ನನ್ನ ಮನೆ ಇರುವುದಕ್ಕೆ ದಾಖಲಾತಿಯನ್ನು ನೀಡಿರುವುದಿಲ್ಲ. ಈ ಸ್ವತ್ತು ಗಂಗಯ್ಯನವರ ಹೆಸರಿನಲ್ಲಿರುವುದಕ್ಕೆ ದಾಖಲಾತಿ ನೀಡಿಲ್ಲ ಎಂದರೆ ಸರಿ. ಸರ್ವೆ ನಂಬರ್-127/1 ಎ.ಸಿ. ರಂಗಯ್ಯನವರ ಹೆಸರಿನಲ್ಲಿದೆ, ನೀವು ಅನುಭವಿಸುತ್ತಿರುವುದಕ್ಕೆ ಪಹಣಿ ನೀಡಿಲ್ಲ ಎಂದರೆ ಸಾಕ್ಷಿ ನೀಡಿದ್ದೇನೆಂದು ನುಡಿಯುತ್ತಾರೆ. ನಾನು ತಾಲ್ಲೂಕು ಕಚೇರಿಯಲ್ಲಿ ಪೋಡಿ ಮತ್ತು ಅಳತೆ ಮಾಡಬೇಕೆಂದು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಒಂದು ಎಕರೆ ಜಮೀನು ಅಳತೆ ಮಾಡಿಕೊಡಿ ಎಂದು ದಾವೆ ಹೂಡಿರುತ್ತೇನೆ. ವಾದಪತ್ರದಲ್ಲಿ ಏನು ಬರೆದಿದೆ ಎಂದು ಹೇಳಲು ಆಗುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಿಕೆಯಲ್ಲಿರುವ ಅಂಶಗಳು ನನಗೆ ಹೇಳಲು ಆಗುವುದಿಲ್ಲ. ದಾವ ಸ್ವತ್ತಿನ ಸ್ವಾಧೀನದಲ್ಲಿ ನೀವು ಇಲ್ಲ, ನೀವು ಸುಳ್ಳು ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ. ನಾನು ಲಕ್ಷ್ಮಯ್ಯನವರ ಒಬ್ಬರೇ ಮೇಲೆ ಮಾತ್ರ ದಾವೆ ಹೂಡಿರುತ್ತೇನೆ, ಉಳಿಕೆ ಯಾರ ಮೇಲೆ ದಾವೆ ಹಾಕಿರುವುದಿಲ್ಲ. ನಿಮಗೆ ದಾವ ಸ್ವತ್ತಿನ ಮೇಲೆ ಹಕ್ಕು ಮಾಲೀಕತ್ವ ಇಲ್ಲ, ಪ್ರತಿವಾದಿ 3 ರವರ ಮೇಲೆ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

ಅ.ಸಿ.ಜ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.